ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ. ಹೆಚ್ ಆರ್. ಶ್ರೀ ಎಸ್.ಎನ್.ಜಿ ವಕೀಲರ ಪರವಾಗಿಃ

ನಾನು ಯಾವ ಇಸವಿಯಲ್ಲಿ ಪ್ರತಿವಾದಿ ಕಂಪನಿಗೆ ಸೇರಿದ್ದೇ ಎಂದು ನೆನಪಿಲ್ಲ. ಕಂಪನಿಯಲ್ಲಿ ನಿರ್ದೇಶಕ ಎಂದಾದರೆ ಒಂದು Identification Number ಕೊಡುತ್ತಾರೆ ಎಂದರೆ ಸರಿ. ಆದರೆ ನನ್ನ ನಂಬರ್ ನನಗೆ ನೆನಪಿಲ್ಲ. ನಾನು ಕಂಪನಿಯ ನಿರ್ದೇಶಕ ಎಂಬ ಬಗ್ಗೆ ಗುರುತಿನ ಚೀಟಿ ಕೊಡುತ್ತಾರೆ ಎಂದರೆ ಕೊಡುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ 154 ನ್ನು ನಾನು Registrar of Companies ಇಂದ ಪಡೆದುಕೊಂಡಿದ್ದೆ. Registrar of Companies ಇಂದ ದಾಖಲೆ ಪಡೆದುಕೊಳ್ಳಬೇಕಾದರೆ ಶುಲ್ಕ ಪಾವತಿಸಬೇಕೆಂದರೆ ಸರಿಯಲ್ಲ. ನಿಡಿ 154 ನ್ನು ನಾನು Registrar of Companies ಇಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. Registrar of Companies ಇಂದ ನಾನು ದಾಖಲೆಗಳನ್ನು ಪಡೆದುಕೊಂಡಿದ್ದಲ್ಲಿ ನಾನು ದೃಢೀಕೃತ ನಕಲುಗಳನ್ನು ಹಾಜರು ಮಾಡುತ್ತಿದ್ದೆ ಎಂದರೆ ಸಾಕ್ಷಿಯು ದೃಢೀಕೃತ ನಕಲುಗಳು ಇಲ್ಲ ಎಂದು ನುಡಿಯುತ್ತಾರೆ. ನಿಡಿ 154 ದೃಢೀಕೃತ ನಕಲು ಅಲ್ಲದ ಕಾರಣ Registrar of Companies ಇಂದ ಕೊಟ್ಟಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ 155 ರಲ್ಲಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಕಂಪನಿ ಆಸ್ತಿತ್ವದಲ್ಲಿ ಇತ್ತು ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ನಿಡಿ 155 ಆ ಬಗ್ಗೆ ಹೇಳುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಕಂಪನಿ ಈಗಲೂ ಆಸ್ತಿತ್ವದಲ್ಲಿದೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಲು ತೊಂದರೆ ಇಲ್ಲ.

ನಿಡಿ **156** ನನ್ನಗೆ ಸಂಬಂದಿಸಿದ Balance Sheet ಆಗಿದೆ. ನಿಡಿ **156** **2005-06** ಇಸವಿಗೆ ಸಂಬಂದಿಸಿದೆ. **2005-06** ನೇ ಸಾಲಿನ Balance sheet ನ್ನು Registrar of Companies ಗೆ ಸಲ್ಲಿಸಲು ಆ ಸಾಲಿನ ಎಲ್ಲಾ ನಿರ್ದೇಶಕರು ಸಹಿ ಮಾಡಿಲ್ಲ. ನಿಡಿ **156** ನ್ನು Balance sheet ನ್ನು Chartered Accountant ಅದ ಎಂ ಕಿಶೋರ್ ತಯಾರಿಸಿದ್ದಾರೆ. ಎಂ ಕಿಶೋರ್ ತಯಾರಿಸಿದ್ದಾರೆ ಎಂದು ನಾನು ದಾಖಲೆ ನೋಡಿ ಹೇ ಳುತ್ತಿದ್ದೇನಾ ಅಥವಾ ನನಗೆ ಆ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಎಂ ಕಿಶೋರ್ ರವರಿಗೆ Balance sheet ತಯಾರಿಸಲು ಮಾಹಿತಿ ಕೊಟ್ಟವರು ಯಾರು ಎಂದರೆ ಸಾಕ್ಷಿಯು Board of Directors ಎಂದು ನುಡಿಯುತ್ತಾರೆ. ಎಂ ಕಿಶೋರ್ ರವರಿಗೆ ಲಫೀರ್ ಮೊಹಮ್ಮದ್ ಮತ್ತು ಡಾಃ ಅಬ್ದುಲ್ ಅಲ್ ಸಬಾಹಿ ಎಂಬ ನಿರ್ದೇಶಕರು ಮಾಹಿತಿ ಕೊಟ್ಟಿದ್ದರು. ದಾವಾ ಸ್ವತ್ತನ್ನು ಹೇಗೆ ಹಣ ಹೊಂದಿಸಿ ಖರೀದಿಸಿದ್ದರು ಎಂಬ ಬಗ್ಗೆ ನಿಡಿ **156** ರಲ್ಲಿ ನಮೂದಿಸಿದ್ದಾರೆ. ಯಾವ ಮೂಲದಿಂದ ಹಣ ಹೊದಗಿಸಲಾಗಿದೆ ಎಂಬ ಬಗ್ಗೆ ನಿಡಿ **156** ಮತ್ತು **157** ರಲ್ಲಿ ನಮೂದು ಇದೆ. Board of Directors ನಿಡಿ **156** ಮತ್ತು **157** ತಯಾರಿಸಲು ಮಾಹಿತಿ ಕೊಡದಿದ್ದರೂ ಕೂಡ ಕೊಟ್ಟಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ **156** ಮತ್ತು **157** ನ್ನು Registrar of Companies ನೇರವಾಗಿ ಸಲ್ಲಿಸಿದ್ದರೆ ಹಿಂಬರಹ ಕೊಡುತರೆ ಅಥವಾ Online ನಲ್ಲಿ ಸಲ್ಲಿಸಿದ್ದರೆ ಆ ಬಗ್ಗೆ ರಶೀದಿ ಪಡೆದುಕೊಳ್ಳಬಹುದು ಎಂದರೆ ಸರಿ, ಆದರೆ ಅಂತಹ ದಾಖಲೆ ನಾನು ಹಾಜರು ಮಾಡಿಲ್ಲ. ನಿಡಿ **156** ಮತ್ತು **157** ನ್ನು ನಾನು ಈ ದಾವೆ ಗೋಸ್ಕರ ಸೃಷ್ಟಿಸಿದ್ದು Registrar of Companies ಗೆ ಅಂತಹ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನಾನು ನಿಡಿ 1 ರ ಮೂಲ ಪ್ರತಿ (ಕಂಪನಿಯ ರೆಸುಲುಷನ್) ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ಮೂಲ ಪ್ರತಿ ಹಾಜರು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ನ್ನು ಈ ದಾವೆ ಗೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ 1 ಕ್ಕೆ ಸಂಬಂದಪಟ್ಟಂತೆ ಯಾವುದೇ ನಡಾವಳಿಯಾಗಿಲ್ಲ ಎಂದರೆ ಸರಿಯಲ್ಲ. ಮಿನಿಟ್ ಬುಕ್ಕ್ ನ್ನು ನಾನು ನ್ಯಾಯಾಲಕ್ಕೆ ಹಾಜರು ಮಾಡಿಲ್ಲ ಎಂದರೆ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಡಿ 1 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊಡೆದುಕೊಳ್ಳುವ ಉದ್ದೇಶದಿಂದ 2 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಈ ಮೇಲೆ ಹೇಳಿದ ದಾಖಲೆಗಳನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.